ಸಿಸಿ. ನಂ. 286–22

ಪಿ .ಡಬ್ಲ್ಯೂ–1

ದಿನಾಂಕಃ 03–09–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಡಿ.ಎನ್ ಎನ್ ವಕೀಲರಿಂದಃ

1. ನಾನು ಸದ್ರಿ ಸಂಸ್ಥೆ ಯಲ್ಲಿ ಸುಮಾರು 14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ . ನಾನು ಮೊದಲು ಕ್ಲಕ್ ಆಗಿದ್ದೆ ಈ ಮ್ಯಾನೇಜರ ಅಗಿ ಕೆಲಸ ಮಾಡುತ್ತಿದ್ದೇನೆ. ನಾನು ಕ್ಲರ್ಕ ಆಗಿ ಈ ಸಂಸ್ಥೆ ಗೆ ಸೇರಿದಾಗಿನಿಂದ ಈ 2 ವರ್ಷದ ಹಿಂದಿನವರೆಗೂ ಕ್ಲರ್ಕ ಆಗಿ ಕೆಲಸ ಮಾಡುತ್ತಿದ್ದೆ. ಈಗಾ ಇತ್ತೀಚೆಗೆ 2 ವರ್ಷಗಳಿಂದ ಮ್ಯಾನೇಜರ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನೀವು ಕ್ಲರ್ಕ ಅಥವಾ ಮ್ಯಾನೇಜರ ಆಗಿ ಕರ್ತವ್ಯ ನಿರ್ವಹಿಸುತ್ತೀದ್ದೀರಿ ಎಂದು ಠರಾವಿನಲ್ಲಿ ,ಪಿರ್ಯಾದಿಯಲ್ಲಿ ಮತ್ತು ನೋಟಿಸನಲ್ಲಿ ನಮೂದು ಆಗಿಲ್ಲ ಎಂದರೆ ಠರಾವಿನಲ್ಲಿ ಇರಬಹುದು. ಠರಾವಿನಲ್ಲಿ ಇರಬಹುದು ಎಂದು ಠರಾವು ನೋಡಿ ಹೇಳಬಹುದಾ ಸಾಕ್ಷಿಗೆ ನಿಪಿ–8 ನ್ನು ತೋರಿಸಲಾಗಿ ಸಾಕ್ಷಿ ಅದನ್ನು ಓದಿ ನೋಡಿ ಸಿಬ್ಬಂದಿ ಎಂದು ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಕ್ಲರ್ಕ ಮ್ಯಾನೇಜರ ಸಿಬ್ಬಂದಿ ಬೇರೆ ಬೇರೆ ಎಂದರೆ ಸಿಬ್ಬಂದಿ ಎಂಬ ಹೆಸರಿನಲ್ಲಿ ಎಲ್ಲಾ ವರ್ಗದ ನೌಕರರು ಬರುತ್ತಾರೆ . ಕ್ಲರ್ಕ ಮ್ಯಾನೇಜರ ಸಿಬ್ಬಂದಿ ಬೇರೆ ಬೇರೆ ಯಾಗಿರುತ್ತಾರೆ ಅವರು ಎಲ್ಲರೂ ಸಿಬ್ಬಂದಿ ವರ್ಗದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ .

2. ಆಡಳಿತ ಮಂಡಳಿಯಲ್ಲಿ 12 ಜನ ಇರುತ್ತಾರೆ . ಠರಾವಿನ ಪ್ರಕಾರ ನನಗೆ ಅಧಿಕಾರ ನೀಡುವ ಸಮಯದಲ್ಲಿ 8 ಜನ ಸದಸ್ಯರು ಬಹುಮತ ತೋರಿಸಿರುತ್ತಾರೆ. ಆ ಠರಾವಿನಲ್ಲಿ 8 ಜನ ಬಹುಮತ ಸದಸ್ಯರು ಸಹಿ ಹಾಕಬೇಕಾಗುತ್ತದೆ ಎಂರದೆ ಸರಿ . ಸದ್ರಿ ನಿಪಿ–8 ಯಥಾ ನಕಲೋ ಅಥವಾ ಮೂಲ ಪ್ರತಿಯೋ ಅದು ಠರಾವಿನ ಯಥಾ ನಕಲು ಆಗಿರುತ್ತದೆ . ಆ ಠರಾವು ಹೊರಡಿಸಿದ್ದಲ್ಲಿ 8 ಜನ ಸದಸ್ಯರು ಸಹಿ ಹಾಕಿರುತ್ತಾರೆ . ನಿಪಿ–8 ರ ಯಥಾ ನಕಲಿನಲ್ಲಿ ಆ 8 ಜನ ಸದಸ್ಯರ ಸಹಿ ಇರಬೇಕು ಎಂದರೆ ಯಥಾ ನಕಲಿನಲ್ಲಿ 8 ಜನ ಸದಸ್ಯರ ಸಹಿ ಹಾಕಿಸಿಕೊಳ್ಳುವುದಿಲ್ಲ . ನಿಪಿ–8 ರಲ್ಲಿ 8 ಜನ ಸದಸ್ಯರ ಸಹಿ ಇರುವುದಿಲ್ಲ ಎಂದರೇ ಯಥಾ ನಕಲಿನಲ್ಲಿ 8 ಜನ ಸದಸ್ಯರು ಸಹಿ ಮಾಡುವುದಿಲ್ಲ . ನಿಮಗೆ ಅಧಿಕಾರ ಕೊಡುವಾಗ ಯಾವುದೇ ರೀತಿಯ

ಆಡಳಿತ ಮಂಡಳಿಯ ಸಭೆ ಕರೆದದ್ದು ಇಲ್ಲ . ಹಾಗೂ ಬಹುಮತ ಸದಸ್ಯರ ಒಪ್ಪಿಗೆ ಕೊಟ್ಟದ್ದು ಇಲ್ಲ ಎಂದರೆ ಸರಿಯಲ್ಲ . ಆ ಠರಾವಿನ ಮೂಲ ಪ್ರತಿ ನಿಮ್ಮ ಸೊಸೈಟಿಯಲ್ಲಿ ಇಲ್ಲ ಎಂದರೆ ಸರಿಯಲ್ಲ . ಆ ಕಾರಣದಿಂದ ಸದ್ರಿ ಠರಾವಿನ ಮೂಲ ಪ್ರತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಆ ಕಾರಣದಿಂದ ನಿಮಗೆ ಈ ಪ್ರಕರಣಕ್ಕೆ ಸಂಭಂಧಿಸಿದಂತೆ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಆರೋಪಿಯು ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಾಲ ಪಡೆದುಕೊಂಡಿರುತ್ತಾನೆ . ಆವರು ಮೀನು ವ್ಯಾಪಾರಕ್ಕಾಗಿ ಬೋಟ ಖರೀದಿ ಮಾಡುತ್ತೇನೆ ಎಂದು ಪಡೆದ ಸಾಲವಾಗಿತ್ತು . ಆ ಬೋಟ ಖರೀದಿ ಮಾಡಲು ಎಷ್ಟು ಹಣ ಬೇಕಾಗುತ್ತದೆ ಎಂದು ಅದರ ಕೊಟೇಷನ ನೀವು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ .

3. ಆರೋಪಿಯು ನಾಯ್ಕ ಜಾತಿಗೆ ಸೇರಿದವರು . ಯಾವ ನಾಯ್ಕ ಜಾತಿ ಎಂದು ನನಗೆ ನೆನಪಿಲ್ಲ .ಬೋಟ ಖರೀದಿ ಮಾಡುವುದು ಮೀನುಗಾರಿಕೆ ಮಾಡುವುದು ನಾಯ್ಕ ಜಾತಿಯವರು ಅಲ್ಲ . ಖಾರ್ವಿ ಮತ್ತು ಹರಿಕಂತ್ರ ಹಾಗೂ ಅಂಬಿಗ ಜಾತಿಗೆ ಸೇರಿದವರುಎಂದರೆ ಎಲ್ಲಾ ಜಾತಿಯವರು ಮೀನುಗಾರಿಕೆ ಮಾಡುತ್ತಾರೆ .

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.